# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 183 |
| ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 01.02.2021 |
| ಉತ್ತರಿಸುವ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಶಾಲಾ ಮಕ್ಕಳಿಗೆ ಇಲ್ಲಿಯವರೆಗೆ ವಿತರಿಸಲಾಗುತ್ತಿರುವ ಸಮವಸ್ತ್ರಗಳ ಪ್ರಮಾಣವೆಷ್ಟು; (ವಾರ್ಷಿಕವಾರು ಕಳೆದ ಮೂರು ವರ್ಷಗಳ ಮಾಹಿತಿ ಒದಗಿಸುವುದು) | ಸರ್ಕಾರಿ ಶಾಲಾ ಮಕ್ಕಳಿಗೆ ಕಳೆದ ಮೂರು ವರ್ಷಗಳಲ್ಲಿ ವಿತರಿಸಲಾಗಿರುವ ಸಮವಸ್ತ್ರಗಳ ಪ್ರಮಾಣ ಕೆಳಕಂಡಂತಿದೆ.<br><br>ವರ್ಷ / ಪ್ರಮಾಣ / ಮಕ್ಕಳ ಸಂಖ್ಯೆ<br>2017-18 / 124.85 ಲಕ್ಷ ಮೀಟರ್ / 44,16,460<br>2018-19 / 126.50 ಲಕ್ಷ ಮೀಟರ್ / 44,57,442<br>2019-20 / 124.31 ಲಕ್ಷ ಮೀಟರ್ / 43,61,096 |
| ಆ) | ಇದಕ್ಕೆ ವಾರ್ಷಿಕವಾಗಿ ತಗಲುತ್ತಿದ್ದ ವೆಚ್ಚ ಎಷ್ಟು; (ಕಳೆದ ಮೂರು ವರ್ಷಗಳ ಮಾಹಿತಿ ಒದಗಿಸುವುದು. | ಸರ್ಕಾರಿ ಶಾಲಾ ಮಕ್ಕಳಿಗೆ ಕಳೆದ ಮೂರು ವರ್ಷಗಳಲ್ಲಿ ಸಮವಸ್ತ್ರಗಳ ವಿತರಣೆಗಾಗಿ ವೆಚ್ಚ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ.<br><br>ವರ್ಷ / ವೆಚ್ಚ ಮಾಡಲಾದ ಅನುದಾನ ಕೋಟಿಗಳಲ್ಲಿ<br>2017-18 / 75.44<br>2018-19 / 74.43<br>2019-20 / 72.17 |
| ಇ) | ಸದರಿ ಸಮವಸ್ತ್ರಗಳನ್ನು ಎಲ್ಲಿಂದ ಖರೀದಿಸಲಾಗುತ್ತಿತ್ತು; | ಸದರಿ ಸಮವಸ್ತ್ರಗಳನ್ನು ಕರ್ನಾಟಕ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ಇ-ಟೆಂಡರ್ ಮೂಲಕ ಆಯ್ಕೆಯಾದ ಎಲ್-1 ಸಂಸ್ಥೆಯಿಂದ ಖರೀದಿಸಲಾಗಿದೆ. |
| ಈ) | ಜವಳಿ ಅಭಿವೃದ್ಧಿ ನಿಗಮದಿಂದ ಖರೀದಿಸುವ ಬಗ್ಗೆ ಸರ್ಕಾರದ ಅಭಿಪ್ರಾಯಗಳೇನು? | 1] ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ಸಂಸ್ಥೆಯಿಂದ 2017-18ನೇ ಸಾಲಿನಲ್ಲಿ 15 ಲಕ್ಷ ಮೀಟರ್ ಸಮವಸ್ತ್ರ ಸರಬರಾಜು ಮಾಡಲು ಕಾರ್ಯದೇಶ ನೀಡಲಾಗಿರುತ್ತದೆ. ಆದರೆ ಕೊನೆಯ ಹಂತದಲ್ಲಿ ಸದರಿ ಸಂಸ್ಥೆಯವರು 10 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿ ಪ್ರಮಾಣದ ಸಮವಸ್ತ್ರವನ್ನು ಇ-ಟೆಂಡರ್ ಮೂಲ ಖರೀದಿಸಿ ವಿತರಿಸಲಾಗಿದೆ.<br><br>2] 2018-19ನೇ ಸಾಲಿನಲ್ಲಿಯೂ ಸಹ ಸದರಿ ನಿಗಮಕ್ಕೆ 20 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯನ್ನು ಸರಬರಾಜಿಗೆ ಕಾರ್ಯಾದೇಶವನ್ನು ನೀಡಲಾಗಿತ್ತದೆ. ಆದರೆ ಸದರಿ |

| | | |
|---|---|---|
| | | ಸಂಸ್ಥೆಯವರು 3.2 ಲಕ್ಷ ಮೀಟರ್ ಸಮವಸ್ತ್ರ ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿ ಪ್ರಮಾಣದ ಸಮವಸ್ತ್ರವನ್ನು ಕರ್ನಾಟಕ ರಾಜ್ಯ ಕೈಮೊಗ್ಗ ಅಭಿವೃದ್ಧಿ ನಿಗಮದಿಂದ ಪಡೆಯಲಾಗಿರುತ್ತದೆ.<br><br>3। 2019-20ನೇ ಸಾಲಿನಲ್ಲಿ ಮಾತ್ರ ಸದರಿ ಸಂಸ್ಥೆಯವರು ನಿಗದಿತ ಕಾರ್ಯಾದೇಶದಂತೆ ಪೂರ್ಣ ಪ್ರಮಾಣದಲ್ಲಿ 9.93 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಿರುತ್ತಾರೆ.<br><br>4। 2020-21ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ 9.82 ಲಕ್ಷ ಮೀಟರ್ ಸಮವಸ್ತ್ರ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ. ಆದರೆ ಸದರಿ ಸಂಸ್ಥೆಯವರು ಸಮವಸ್ತ್ರ ಬಟ್ಟೆಯನ್ನು ಸಬರಾಜು ಮಾಡಲು ಸಾಧ್ಯವಿಲ್ಲವೆಂದು ಪೂರ್ಣ ಪ್ರಮಾಣವನ್ನು ಆಧ್ಯರ್ಪಿಸಿರುತ್ತಾರೆ.<br><br>ರಾಜ್ಯದ ನೇಕಾರರ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲು ಅನೇಕ ಬಾರಿ ಅವಕಾಶ ನೀಡಿದರೂ ಸಹ ನಿಗದಿ ಅವಧಿಯಲ್ಲಿ ಕಾರ್ಯದೇಶದಲ್ಲಿ ನಿಗದಿಪಡಿಸಲಾದ ಪೂರ್ಣ ಪ್ರಮಾಣದ ಸಮವಸ್ತ್ರದ ಬಟ್ಟೆಯನ್ನು ಸರಬರಾಜು ಮಾಡದೇ ಇರುವುದರಿಂದ ಮಕ್ಕಳಿಗೆ ಸಮವಸ್ತ್ರ ವಿತರಣೆಯಲ್ಲಿ ವಿಳಂಬ ಉಂಟಾಗಿ ಇಲಾಖೆಗೆ ಅನೇಕ ಬಾರಿ ಸಾರ್ವಜನಿಕರಿಂದ ಮುಜುಗರಕ್ಕೆ ಒಳಗಾಗಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ಸಂಸ್ಥೆಯವರು ಕಾರ್ಯದೇಶದಂತೆ ನಿಗದಿತ ಪ್ರಮಾಣದ ಸಮವಸ್ತ್ರ ಬಟ್ಟೆಯನ್ನು ಸಕಾಲದಲ್ಲಿ ಪೂರೈಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯಿಸಿದೆ. |

ಇಪಿ 05 ಎಂಎಂಎಸ್ 2021

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು